ಶ್ರೀ ಎನ್. ಚಿಕ್ಕೇಗೌಡ.—ಒಂದು ನುಮಾರು 6 ಮೈಲಿ ಇದೆ, ಇನ್ನೊಂದು ನುಮಾರು ಎರಡೂವರೆ ಮೈಲಿ ಇದೆ, ಇವು ನಣ್ಣ ಪ್ರಮಾಣದ ರಸ್ತೆಗಳು. ಇವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆಗಲೇ ಹೇಳಿದೆ, ಈ ನಲ ತೆಗೆದುಕೊಳ್ಳುವಂತಹ ರಸ್ತೆಗಳ ಪಟ್ಟಿಯನ್ನು ಮಾಡುತ್ತೇವೆ, ಆಗ ಇವನ್ನು ಸೇರಿನುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಯಾವಾಗ ಪಟ್ಟಿ ತಯಾರು ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಪಟ್ಟಿ ತಯಾರು ಮಾಡುತ್ತಾ ಇದ್ದೇವೆ, ಇದು ಒಬ್ಬನ ಅಧಿಕಾರ ದಲ್ಲಿ ಇಲ್ಲ, ಈಗಾಗಲೇ ನಣ್ಣ ಪ್ರಮಾಣದ ರಸ್ತೆಗಳನ್ನು ತೆಗೆದುಕೊಂಡಿದ್ದೇವೆ, ಅದಕ್ಕೆ ದುಡ್ಡು ಸಾಲದಂತಹ ಪರಿಸ್ಥಿತಿ ಇದೆ, ಆದ್ದರಿಂದ ಅದಕ್ಕೆ ಕನ್‌ಸರ್‌ನ್ಡ್ ಡಿಪಾರ್ಟ್‌ಮೆಂಟು ಮತ್ತು ಫೈನಾನ್ಸ್ ಡಿಪಾರ್ಟಿಮೆಂಟನ್ನು ನಾನು ಕನ್‌ಸರ್ಲ್ ಮಾಡಬೇಕಾಗುತ್ತದೆ. ಬಹುಶಃ ಈ ವರ್ಷದ ಕಾರಾವಧಿ ಯಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದು ಎಂದು ನಾನು ನಂಬಿಕೆ ಇಟ್ಟುಕೊಂಡಿದ್ದೇನೆ.

Construction of a Bridge across Tungabhadra

*Q.—477. Sri C. M. CHURCHIHAL MATH (Mundargi).—

Will the Minister for Public Works be pleased to state :—

(*a*) whether it is not a fact that Sri Sri Honagudi of Gadag has made correspondence with the Government regarding construction of a bridge across Tungabhadra river near Shingatalur as it would be convenient and that the plan and estimate have already been prepared ;

(*b*) if so, the stage at which it stands ?

A.—Sri VEERENDRA PATIL (Minister for Public Works).—

(*a*) Yes.

(*b*) It is under consideration.

ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ್.—ಇದರ ಪರಿಶೀಲನೆ ಮುಗಿದು ಇದು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಾದರೂ ಇದು ಪ್ರಾರಂಭವಾಗಬಹುದೇ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅದಕ್ಕೆ 20—30ಲಕ್ಷ ರೂಪಾಯಿ ಬೇಕಾಗುತ್ತದೆ.

ಶ್ರೀ ಸಿ. ಎಂ. ಚುರ್ಚಿಹಾಳ ಮಠ್.—ಮಧ್ಯದಲ್ಲಿ ಬೇರೆ ಯಾವ ರಸ್ತೆ ಅಥವಾ ಸೇತುವೆಗಳು ಇಲ್ಲ. ಆದುದರಿಂದ ಬೆಂಗಳೂರು-ಧಾರವ್ಯಾಡಕ್ಕೆ ಹೋಗಬೇಕಾದರೆ ನೂರಾರು ಮೈಲಿ ಸುತ್ತಿ ಕೊಂಡು ಹೋಗಬೇಕಾಗುತ್ತದೆ. ಆದಕಾರಣ ಇದನ್ನು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಆಗಬಹುದು ಅನ್ನತಕ್ಕ ಅಭಿಪ್ರಾಯವಿದೆ ಅನ್ನುತ್ತಾರೆ. ಅದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.—ತುಂಗಭದ್ರ ಡ್ಯಾಮನ್ನು ಕಟ್ಟಿದ ಮೇಲೆ ನೇರ ಸಂಪರ್ಕ ತಪ್ಪಿ ಹೋಯಿತು. ಆದುದರಿಂದ ಅಲ್ಲಿ ಒಂದು ಬ್ರಿಡ್ಜಿನ ಅಗತ್ಯ ಬಹಳವಾಗಿದೆ ಎಂದು ಅಲ್ಲಿಯ ಜನರೂ ಒತ್ತಾಯ ಮಾಡುತ್ತಿದ್ದಾರೆ. ಅದರ ಅಗತ್ಯವನ್ನು ಸರ್ಕಾರವೂ ಕೂಡ ಮನಗಂಡಿದೆ. ಆದುದರಿಂದಲೇ ಅದನ್ನು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕು ಎಂದು ಮನಸ್ಸು ಮಾಡಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಅಂದಾಜು ಇತ್ಯಾದಿಗಳನ್ನು ತಯಾರಿಸಿದರೂ ಕೂಡ ಅದು ನಿಧಾನವಾಗುವುದಕ್ಕೇನು ಕಾರಣ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ 20—30ಲಕ್ಷ ರೂಪಾಯಿ ಬೇಕಾಗುತ್ತದೆ. ಅದಕ್ಕಾಗಿ ಅದು ನಿಧಾನವಾಯಿತು. ಅದನ್ನು ಈಗ ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ಪರಿಶೀಲನೆ ಮಾಡುತ್ತಿದ್ದೇವೆ.

Scarcity Conditions in Ron Taluk

*Q.—238. Sri A. J. DODDAMETI (Ron).—

Will the Minister for Revenue and Forests be pleased to state :—

(*a*) whether they are aware of the prevalence of scarcity conditions this year in the villages covered by Hingaru and Mungaru rains in Ron Taluk, Dharwar District, as a result of untimely, unfavourable seasonal conditions in these villages ;

(*b*) what are the annewari figures of this year in these regarding Rabi and Khariff crops (villagewise figures may be furnished) ;

(*c*) whether they are aware of the necessity to stop the procurement of foodgrains in Ron Taluk, due to scarcity condition existing there ;

(*d*) whether they intend to take up relief measures in the affected villages of the said taluk ?

A.—Sri G. B. SHANKAR RAO (Deputy Minister for Revenue).—

(*a*) Yes.

(*b*) *Vide* Annexures 'A' and 'B' appended.

(*c*) In view of the existing provisions in the levy order, this question does not arise.

(*d*) Yes.